# ಒಂಟೆ ಕೈಗೊಂಬೆಯ ಸೂಚನೆಗಳು

ಒಂಟೆ ಸಾಹಸಗಳು, ವಿಬಿಎಸ್ ನಲ್ಲಿ ನಿಮಗಾಗಿ ಕಾಮಲೊಟ್ ಮತ್ತು ಕಾಮೆಲಿಯಾ ನಡುವೆ ಪ್ರತಿದಿನದ ಕೈಗೊಂಬೆ ನಾಟಕಗಳನ್ನು ಬರೆಯಲಾಗಿದೆ. ನಿಮ್ಮ ವಿಬಿಎಸ್ ನಲ್ಲಿ ವಿದ್ಯಾರ್ಥಿಗಳು ಈ ಒಂಟೆಗಳ ಬಗ್ಗೆ ತಿಳಿದುಕೊಳ್ಳುವಾಗ ಸಂತೋಷಿಸುವರು. ಈ ಎರಡು ಕೈಗೊಂಬೆಗಳನ್ನು ಮಾಡಲು ಬೇಕಾದ ಸೂಚನೆಗಳು ಹಾಗೂ ಮಾದರಿಗಳನ್ನು ನಾವು ಸಂತೋಷದಿಂದ ತಿಳಿಸಿದ್ದೇವೆ. ನೀವು ವಿವಿಧ ಸಾಮಗ್ರಿಗಳನ್ನು ಅಥವಾ ನಿಮ್ಮ ಸ್ಥಳದಲ್ಲಿ ಅನುಕೂಲಕರವಾದ ಬೆಲೆಗೆ ಸಿಗುವ ವಸ್ತುಗಳನ್ನು ಖರೀದಿಸಿರಿ.

1. ನಿಮಗೆ ಬೇಕಾಗಿರುವ ಸಾಮಗ್ರಿಗಳನ್ನು ತಂದುಕೊಳ್ಳಿರಿ.
    - ಕತ್ತರಿಗಳು
    - ಪೆನ್ಸಿಲ್ (ಬಟ್ಟೆಯ ಮೇಲೆ ಮಾದರಿಗಳನ್ನು ಟ್ರೇಸ್ ಮಾಡಲು)
    - ಗ್ಲೂ (ಬಟ್ಟೆಯ ಮೇಲೆ ವೇಗವಾಗಿ ಅಂಟಿಕೊಳ್ಳುವಂಥದ್ದು: ಸಿಲಿಕಾಲ್ ಅಥವಾ ಹಾಟ್ ಗ್ಲೂ)
    - ತುಂಬುವದು ಅಥವಾ ಹಾಸಿಗೆಗೆ ತುಂಬಲು ಹಾಳೆಗಳಾಗಿ ತಯಾರಿಸಿದ ಹತ್ತಿ, ಕ್ವಿಲ್ಟಿಂಗ್ ಲೈನ್ ರ್ ಕೆಲಸಗಳು ½ ಮೀಟರ್ ಸಹ ಆಗಬಹುದು
    - ಕಾರ್ಡ್ ಬೋರ್ಡ್ (ಬಾಯಿ ಭಾಗವನ್ನು ಬಿಗಿಗೊಳಿಸಲು)
    - ದೊಡ್ಡ ಬಾಯಿಯ ಹೊಲಿಗೆ ಸೂಜಿ
    - ಹೆಚ್ಚು ತೂಕವಿರದ ನೂಲು
    - ಸಣ್ಣ ಗೊಂಡೆಗಳು (ಫಫ್ ಬಾಲ್ಸ್)
    - 1 ಮೀಟರ್ ಉಣ್ಣೆಯಿಂದ ಮಾಡಿರುವ ಒಂಟೆ ಬಣ್ಣದ ಬಟ್ಟೆ
    - ಗಾಢವಾಗಿರುವ ಉಣ್ಣೆಯ ವಸ್ತ್ರದ ಸಣ್ಣ ಚೂರು (ಮೂಗು ಮಾಡಲು ಕಪ್ಪು ಅಥವಾ ಕಂದು ಬಣ್ಣ), ಮತ್ತೊಂದು ಕೆಂಪು ಉಣ್ಣೆಯ ಬಟ್ಟೆ (ಬಾಯಿಗೆ) ಮತ್ತು ಕಿವಿಗಳನ್ನು ಮಾಡಲು ಬೇಕಾದರೆ ಪಿಂಕ್ ಬಣ್ಣದ ಉಣ್ಣೆಯ ಬಟ್ಟೆ

2. ಪಿಡಿಎಫ್ ನಲ್ಲಿರುವ ಮಾದರಿ ಹಾಳೆಯನ್ನು ಡೌನ್ ಲೋಡ್ ಮಾಡಿರಿ ಮತ್ತು 11x7 ಅಥವಾ A3 ಹಾಳೆಯಲ್ಲಿ ಎರಡು ಕಾಪಿ ಪ್ರಿಂಟ್ ತೆಗೆದುಕೊಳ್ಳಿರಿ (ಅಥವಾ ಸಣ್ಣ ಹಾಳೆಗಳಲ್ಲಿ ಒಟ್ಟಾಗಿ ಪ್ರಿಂಟ್ ಮಾಡಿರಿ). A4 ಹಾಳೆಯಲ್ಲಿ ಬೇಕಾದರೂ ನೀವು ಪ್ರಿಂಟ್ ಮಾಡಿಸಬಹುದು.
    - ಒಂಟೆ ತಲೆಯ ಭಾಗದ ಮಾದರಿ
    - ಬಾಯಿ ಭಾಗದ ಮಾದರಿ
    - ಮೂಗಿನ ಭಾಗದ ಮಾದರಿ
    - ಕಿವಿಯ ಭಾಗದ ಮಾದರಿ

ಒಂಟೆಗೆ ಬೇಕಾಗುವಷ್ಟು ಬಟ್ಟೆಯನ್ನು ಖರೀದಿಸಿರಿ. ಉಣ್ಣೆಯ ಬಟ್ಟೆಯನ್ನೇ ನಾವು ಶಿಫಾರಸ್ಸು ಮಾಡುತ್ತೇವೆ ಯಾಕಂದರೆ ಅದು ಗಟ್ಟಿಯಾಗಿರುತ್ತದೆ ಮತ್ತು ಹಿಂಜುವುದಿಲ್ಲ. ಆದರೂ ಆದರೂ ನಿಮ್ಮ ಅನುಕೂಲತೆಗೆ ತಕ್ಕ ಹಾಗೆ ನೀವು ಬಟ್ಟೆಯನ್ನು ಉಪಯೋಗಿಸಬಹುದು. ಗಟ್ಟಿಯಾಗಿರುವ ಬಟ್ಟೆಯನ್ನು ಬಳಸಿದರೆ ಉತ್ತಮ.

ಎಷ್ಟು ಬಟ್ಟೆ ಬೇಕಾಗಬಹುದು ಎಂಬದನ್ನು ಅಂದಾಜಿಸಲಾಗಿದೆ, ಮಾದರಿಗಳನ್ನು ತೆಗೆದುಕೊಂಡು ಹೋಗುವದಾದರೆ ನಿಮಗೆ ಬೇಕಾಗುವಷ್ಟು ಬಟ್ಟೆಗಳನ್ನು ಖರೀದಿಸಬಹುದು.

ಒಂಟೆಯ ಬಣ್ಣ, ಸಾಮಾನ್ಯ ಕಂದು ಅಥವಾ ಉಣ್ಣೆಯ ಬಟ್ಟೆ 1 ಮೀಟರ್


ಕೆಂಪು 1/8 ಮೀಟರ್

ಕಂದು ಅಥವಾ ಕಪ್ಪು ಬಣ್ಣ 1/8 ಮೀಟರ್


ಉಣ್ಣೆಯ ಬಟ್ಟೆ: ¼ ಕಂದು ಕೂದಲು

1/3 ಪ್ಯಾಕೇಜ್ ಮಲ್ಟಿ ಕಲರ್ 13mm ಅಳತೆಯ ಗೊಂಡೆಗಳು (ಪಫ್ ಬಾಲ್ಸ್)

## ನಿಮ್ಮ ಕೈಗೊಂಬೆಯನ್ನು ಮಾಡುವದು




1. ದೇಹ ಮತ್ತು ಬಾಯಿಯ ಭಾಗಗಳಿಗಾಗಿ ಬಟ್ಟೆಯನ್ನು ಕತ್ತರಿಸಿಕೊಳ್ಳಿರಿ.
   - ದೇಹದ ಭಾಗಕ್ಕಾಗಿ ಎರಡು ತುಂಡುಗಳನ್ನು ಕತ್ತರಿಸಿರಿ
   - ಬಾಯಿಯ ಭಾಗಕ್ಕಾಗಿ ಒಂದು ತುಂಡು ಕತ್ತರಿಸಿರಿ
2. ತಲೆಯ ಭಾಗಗಳನ್ನು ಒಟ್ಟಾಗಿ ಹೊಲಿಯಿತಿ ಆದರೆ ಬಾಯಿ ಮತ್ತು ಕೆಳಗೆ ಭಾಗವನ್ನು ಹೊಲಿಯ ಬೇಡಿರಿ, ಕೆಳಭಾಗದಿಂದಲೇ ನೀವು ನಿಮ್ಮ ಕೈಯನ್ನು ಒಳಗೆ ಹಾಕಬೇಕಾಗುತ್ತದೆ.
3. ನೇರವಾಗಿರುವ ಭಾಗಗಳನ್ನು ಹೊಲಿಯದೆ ಬಾಯಿಯ ಮೇಲ್ಭಾಗದಲ್ಲಿರುವ ಎರಡು ತುಂಡುಗಳನ್ನು ಹೊಲಿಯಿರಿ. ಬಾಯಿಯ ಕೆಳಭಾಗಕ್ಕೂ ಹೀಗೆಯೇ ಮಾಡಿರಿ. ಪಕ್ಕದಲ್ಲಿರುವ ಸ್ಥಳದ ಹತ್ತಿರದ ಚಿಕ್ಕ ನೇರವಾದ ಭಾಗಗಳನ್ನು ಹೊಲಿಯಿರಿ. ಬಾಯಿಯ ಒಳಭಾಗದಲ್ಲಿರುವ ಉದ್ದವಾಗಿರುವ ತೆರೆದ ಭಾಗವನ್ನು ಹಾಗೆಯೇ ಬಿಡಿರಿ.
4. ಒಳಕ್ಕೂ ಹೊರಗೂ ವಸ್ತ್ರವನ್ನಿಟ್ಟು, ಬಾಯಿಯ ತುಂಡುಗಳನ್ನು ತೆಗೆಯಿರಿ ಮತ್ತು ಬಾಯಿ ತೆರೆಯುವ ಭಾಗದಲ್ಲಿ ಕೆಂಪು ಬಣ್ಣದ ಉಣ್ಣೆ ಬಟ್ಟೆಯನ್ನು ಪಿನ್ ಮಾಡಿರಿ. ಬಾಯಿಯ ಭಾಗದ ಮೂಲೆಗಳು ಸರಿಯಾಗಿ ಹೊಂದಿಕೆಯಾಗುವ ಬಾಯಿ ತೆರೆಯಲು ಅನುಕೂಲವಾಗುವ ಹಾಗೆ ಕೆಂಪು ಬಾಯಿಯನ್ನು ಅರ್ಧಕ್ಕೆ ಮಡಚಿರಿ. ಕೆಂಪು ಬಾಯಿಯ ಸುತ್ತಲೂ ಎಚ್ಚರಿಕೆಯಿಂದ ಹೊಲಿದು ತಲೆಗೆ ಸೇರಿಸಿರಿ.




5. ತಲೆಯ ಭಾಗವನ್ನು ಬಲಗಡೆಗೆ ತಿರುಗಿಸಿರಿ ಆಗ ಹೊಲಿಗೆಗಳೆಲ್ಲವೂ ಒಳಗೇ ಇರುತ್ತದೆ. ಬಾಯ ಒಳಗಿನ ಭಾಗಕ್ಕಾಗಿ ಕಾರ್ಡ್ ಬೋರ್ಡ್ ಕತ್ತರಿಸಿರಿ. ಒಂದುವೇಳೆ ಸುಕ್ಕುಗಟ್ಟಿದ ರಟ್ಟು ಉಪಯೋಗಿಸುತ್ತಿರುವದಾದರೆ, ಮಾದರಿಯು ಉದ್ದದನುಸಾರವಾಗಿ ಇರಬೇಕೆ ಹೊರತು ಸುಕ್ಕುಗಟ್ಟಿದ ಸಾಲಿಗನುಸಾರವಾಗಿ ಇರಬಾರದು, ಆಗ ಅದು ಸುಲಭವಾಗಿ ಬಾಗುತ್ತದೆ. ಅದನ್ನು ಅರ್ಧಕ್ಕೆ ಕತ್ತರಿಸಿರಿ ಮತ್ತು 2cm ಅಂತರವನ್ನು ಬಿಟ್ಟು ಮೇಲಿನಿಂದ ಕೆಳಗಿನ ತನಕ ಟೇಪ್ ಹಾಕಿರಿ.
6. ಬಾಯಿಯ ಉದ್ದಳತೆಯ ಮೇರೆಗೆ ಎರಡು ತುಂಡು ಫಿಲ್ಲರ್ (ಭರ್ತಿ ಸಾಮಗ್ರಿಯನ್ನು) ಕತ್ತರಿಸಿರಿ, ಆದರೆ ಅದು ದಿಂಡಾಗಿ ಸುತ್ತಲು ಅನುಕೂಲವಾಗಿರಬೇಕು, ಎರಡರಲ್ಲಿ ಒಂದೊಂದು ಫಿಲ್ಲರ್ ಅನ್ನು ಮೂಗಿನ ಭಾಗದೊಳಗೆ ಮೇಲಿನಿಂದ ಕೆಳಗಿನ ತನಕ ತುಂಬಿರಿ. ಮೂಗನ್ನು ದೃಢಪಡಿಸಲು ಬೇಕಾಗುವಷ್ಟು ಉಪಯೋಗಿಸಿರಿ. ನೀವು ಕೈಗೊಂಬೆಯನ್ನು ಆಡಿಸುವಾಗ ನಿಮ್ಮ ಕೈ ಕಾರ್ಡ್ ಬೋರ್ಡ್ ಚೂರುಗಳನ್ನು ಮುಟ್ಟುವಂತಿರಬೇಕು. ಫಿಲ್ಲರ್ ನ

ಮತ್ತೊಂದು ದೊಡ್ಡ ತುಂಡಿನಿಂದ ಮತ್ತೆ ಹೀಗೆಯೇ ಮಾಡಿರಿ, ಅದನ್ನು ಗಟ್ಟಿಯಾಗಿ ಮುಖ ಮತ್ತು ತಲೆಯ ಭಾಗಕ್ಕೆ ತಳ್ಳಿರಿ, ಕೆಲವು ಭಾಗ ಕುತ್ತಿಗೆಯ ಹತ್ತಿರಕ್ಕೆ ಬರಲು ಅವಕಾಶವಿರಲಿ. ನಿಮ್ಮ ಕೈ ಕುತ್ತಿಗೆಯ ಮುಂಭಾಗದಲ್ಲಿ ಇರಬೇಕು ಮತ್ತು ಬಾಯಿಯ ಮೊದಲ ಭಾಗವು ಕೈಗೊಂಬೆಯನ್ನು ಕಾಣುವ ಹಾಗೆ ಇರಬೇಕು.

7. ನಿಮ್ಮ ಕೈ ಸುತ್ತಲು ಹಲವು ಮೀಟರ್ ನೂಲು ಸುತ್ತಿಕೊಳ್ಳಿರಿ, ನಿಮ್ಮ ಬೆರಳುಗಳನ್ನು ಹರಡುವಾಗ ತೆಗೆಯಲು ಸುಲಭವಾಗುತ್ತದೆ. ಅದನ್ನು ಮಧ್ಯಕ್ಕೆ ಕಟ್ಟಿರಿ ಮತ್ತು "ಕೂದಲು" ಗೊಂಚಲನ್ನಾಗಿ ಮಾಡಲು ಕುಣಿಕೆಗಳನ್ನು ಹರಡಿರಿ ಮತ್ತು ಸಿಲಿಕಾನ್ ಗ್ಲೂ ಉಪಯೋಗಿಸಿ ಅದನ್ನು ತಲೆಯ ಮೇಲ್ಭಾಗಕ್ಕೆ ಸೇರಿಸಿರಿ.
8. (ನಾವು ಕಾಮೆಲೊಟ್ ಗೆ ಉಪಯೋಗಿಸಿದ ಹಾಗೆ) ಒಂದುವೇಳೆ ರೆಪ್ಪೆಗಳು ಬೇಕೆಂದು ಬಯಸಿದರೆ, ಪೇಪರ್ ಮಾದರಿಯನ್ನು ಬರೆದು, ಅದನ್ನು ಒಂಟೆ ಬಣದ ಉಣ್ಣೆಯ ಮೇಲಿಟ್ಟು ಎರಡನ್ನೂ ಕತ್ತರಿಸಿರಿ. ಮೊದಲನೆಯದಾಗಿ ಕಣ್ಣುಗಳನ್ನು ಮುಖದ ಮೇಲೆ ಅಂಟಿಸಿರಿ, ನಂತರ ನಿಮ್ಮ ಬೆರಳ ಸಹಾಯದಿಂದ ಕಣ್ಣುಗಳ ಮೇಲೆ ರೆಪ್ಪೆಗಳನ್ನು ಅಂಟಿಸಿರಿ. ಒಂದುವೇಳೆ ಕಾಮೆಲಿಯಾ ಮಾಡುವಾಗ, ನೀವು ಖರೀದಿಸಿರುವ ಅಥವಾ ಗಾಢ ಬಣ್ಣದ ಉಣ್ಣೆಯಿಂದ ಕತ್ತರಿಸಿದ ರೆಪ್ಪೆಗಳನ್ನು ಉಪಯೋಗಿಸಬಹುದು.
9. ಕಿವಿಗಳು ಒದಗಿಸಿರುವ ವಿಧಾನದ ಮೇಲೆ ಅಚ್ಚು ಮಾಡುವ ಮೂಲಕ ದೊಡ್ಡದಾಗಿರಲಿ ಅಥವಾ ಚಿಕ್ಕದಾಗಿರಲಿ. ಕಾಮೆಲಿಯಾಗೆ ನಾವು ಮಾಡಿದ ಪ್ರಕಾರ ಪಿಂಕ್ ಸೇರಿಸುವದು ನಿಮ್ಮ ಆಯ್ಕೆಗೆ ಬಿಟ್ಟಿದ್ದಾಗಿದೆ. ನಾವು ಕಿವಿಯ ಹೊರಭಾಗದ ಸುತ್ತಲು ಹೆಮ್ ಅನ್ನು ಒಂಟೆ ಬಣ್ಣದ ಉಣ್ಣೆಯ ಕಿವಿಯ ಮೇಲೆ ಪಿಂಕ್ ಉಣ್ಣೆಯನ್ನು ಸೇರಿಸಿದ ನಂತರ ಕಿವಿ ಸಂಪೂರ್ಣವಾಗುತ್ತದೆ ಮತ್ತು ಬಲಗೊಳ್ಳುತ್ತದೆ. ತಲೆಗೆ ಕಿವಿಯನ್ನು ಎಲ್ಲಿ ಸೇರಿಸಬೇಕೆಂದು ತೀರ್ಮಾನಿಸಿರಿ, ಒಂದುವೇಳೆ ನಿಮಗೆ ಬೇಕಾದರೆ ಅದನ್ನು ಗುಂಗುರು ಮಾಡಬಹುದು. ಹಾಟ್ ಗ್ಲೂ ಬಳಸಿದರೆ ಇವುಗಳು ವೇಗವಾಗಿ ಅಂಟಿಕೊಳ್ಳುತ್ತವೆ.



10. ಕಾಮೆಲಿಯಾ ಮೂಗು ಕಪ್ಪು ಉಣ್ಣೆಯ ಮೇಲೆ ಸಣ್ಣ ಮೂಗಿನ ಮಾದರಿಯನ್ನು ಕತ್ತರಿಸುವದಾಗಿದೆ ಮತ್ತು ಎರಡನ್ನು ಮುಖದ ಮೇಲೆ ಅಂಟಿಸುವದಾಗಿದೆ. ಕಾಮೆಲೊಟ್ ಮೂಗು ಎರಡನೆಯ ಹೆಚ್ಚುವರಿ ಮೂಗನ್ನು ಹೊಂದಿದ್ದು ಕಪ್ಪು "ಹೊಳ್ಳೆಗಳನ್ನು" ಮುಚ್ಚುತ್ತಾ ಕೈಗೊಂಬೆಗೆ ದೊಡ್ಡ ಮೂಗು ಮತ್ತು ಹೆಚ್ಚುವರಿ ಆಯಾಮವನ್ನು ಕೊಡುತ್ತದೆ.



11. ಎಮಬ್ರಾಯಡರಿ ನೂಲನ್ನು ಹಾಕಿ ಸೂಜಿಯಿಂದ ಥ್ರೆಡ್ಡಿಂಗ್ ಮಾಡಿರಿ ಮತ್ತು ಸ್ವಲ್ಪ ಸ್ಥಳವನ್ನು ಬಿಟ್ಟು ಅವುಗಳ ಮೇಲೆ ಗೊಂಡೆಗಳನ್ನು ಹೊಲಿಯುವ ಮೂಲಕ ಕಾಮೆಲಿಯಾವನ್ನು ಅಲಂಕರಿಸಬಹುದು ಹಾಗೂ ಅದನ್ನು ಸಜ್ಜುಗೊಳಿಸಬಹುದು. ನಿಮಗೆ ಮೆಚ್ಚಿಕೆಯಾಗುವ ರೀತಿಯಲ್ಲಿ ಆಕರ್ಷಕ ಕಾರ್ಯಗಳನ್ನು ಮಾಡಿ ಅವುಗಳನ್ನು ಸೂಕ್ತ ಸ್ಥಳಗಳಲ್ಲಿ ಗ್ಲೂ ಮಾಡಿರಿ. ಇದೇ ಕಾರ್ಯವನ್ನು ಕರ್ಲಿ ರಿಬ್ಬನ್ ಬಳಸಿ ಕಾಮೆಲೊಟ್ ಗೂ ಮಾಡಬಹುದು. ನಿಮ್ಮ ನಾಲ್ಕು ಬೆರಳುಗಳಿಗೆ ಕರ್ಲಿ ರಿಬ್ಬನ್ ಸುತ್ತುಕೊಂಡು ತೆನೆಗಳನ್ನು ಮಾಡಬಹುದು ಮತ್ತು ಅನೇಕ ಸುರಳಿ ಸುತ್ತುಗಳನ್ನು ಒಂದು ಕೊನೆಯಲ್ಲಿ ಭದ್ರವಾಗಿ ಹಿಡಿದುಕೊಂಡು ಬೇಕಾದ ಹಾಗೆ ಮಾಡಿಕೊಳ್ಳಬಹುದು. ಬಣ್ಣಬಣ್ಣದ ತೆನೆಯನ್ನು ಮಾಡಲು ವಿರುದ್ಧ ದಿಕ್ಕನ್ನು ಕತ್ತರಿಸಿರಿ. ಅದನ್ನು ಅದರ ಸರಂಜಾಮಿಗೆ ಅಂಟಿಸಿರಿ ಹಾಗೂ ಕರ್ಲಿ ರಿಬ್ಬನ್ ನಿಂದ ಮಾಡಿರುವದನ್ನು ಅದರ ಮೂಗಿಗೆ ಸುತ್ತಿರಿ.
12. ನಿಮ್ಮ ಕೈಗೊಂಬೆಗೆ ಹೊಂದಿಕೆಯಾಗುವ ಸ್ವರವನ್ನು ಅಭಿವೃದ್ಧಿಪಡಿಸುವ ಮೂಲಕ ಸಂತೋಷಪಡಿರಿ.